ಏನಾದರಾಗಲಿ ಇಂಥ ರಾತ್ರಿಯಲ್ಲಿ ಈ ಅಪರಿಚಿತ ಸ್ಥಳದಲ್ಲಿ ಮೈತುಂಬ ಒಡವೆ ತೊಟ್ಟು ಒಬ್ಬಳೆ ಇದ್ದರೆ ಅಪಾಯ ತಪ್ಪಿದ್ದಲ್ಲ. ಏನು ಮಾಡಲಿ? ಎಲ್ಲಿ ಅಡಗಲಿ? ಎಂದು ಸುತ್ತಲೂ ನೋಡಿದಳು. ಇದು ನನ್ನ ತಂದೆಯ ತೋಟಕ್ಕಿಂತ ಸುಂದರವಾದ ತೋಟ ಎಂದು ಅವಳಿಗೆ ಸಂತೋಷವಾಯಿತು. ಹತ್ತಿರದಲ್ಲೇ ಸೊಂಪಾಗಿ ಬೆಳೆದ ನಳನಳಿಸುತ್ತಿದ್ದ ದಪ್ಪಕಾಂಡದ ಒಂದು ಬಾಳೆಯ ಗಿಡವನ್ನು ಕಂಡು ಮೆಲ್ಲನೆ ಅದರ ಬಳಿಗೆ ಬಂದಳು. ಪ್ರೀತಿಯಿಂದ ಅದರ ಮೈ ಸವರಿ, ಭಕ್ತಿಯಿಂದ ಕೈ ಮುಗಿದು, 'ಬಾಳೆ ಗಿಡ, ಬಾಳೆ ಗಿಡ ನಾನು ಒಳ್ಳೆಯ ತಾಯಿಗೆ ಹುಟ್ಟಿದ ಮಗಳಾಗಿದ್ದರೆ ನನಗೆ ದಯವಿಟ್ಟು ನಿನ್ನಲ್ಲಿ ಆಶ್ರಯ ಕೊಟ್ಟು ಕಾಪಾಡು ಎಂದು ಕೇಳಿದಳು. ಬಾಳೆ ಗಿಡ ತಕ್ಷಣ ಎರಡು ಭಾಗವಾಗಿ ಬಾಯಿ ಬಿಟ್ಟಿತು. ರಾಜಕುಮಾರಿ ಒಳ ಹೊಕ್ಕುತ್ತಲೇ ಮತ್ತೆ ಮುಚ್ಚಿಕೊಂಡು ಬಿಟ್ಟಿತು. ಅವಳಿಗೆ ತುಂಬಾ ಆಯಾಸವಾಗಿದ್ದರಿಂದ ಕೂತಂತೆಯೇ ನಿದ್ದೆ ಹೋದಳು.

ಬೆಳಗಾಯಿತು. ಹಕ್ಕಿ ಪಕ್ಷಿಗಳ ಕಲರವ, ಜನಗಳ ಮಾತುಕತೆ ಎಲ್ಲ ಕೇಳಿ ರಾಜಕುಮಾರಿಗೆ ಈಚೆಗೆ ಬರಲು ಧೈರ್ಯವಾಗಲಿಲ್ಲ. ತೋಟದ ಮಾಲಿ ಗಿಡಗಳಿಗೆ ಪಾತಿ ಮಾಡುವುದು ನೀರೆರೆಯುವುದು ಎಲ್ಲಾ ಗೊತ್ತಾಗುತ್ತಿತ್ತು. ಕ್ರಮೇಣ ಬೆಳಗು ಕಳೆದು ಕತ್ತಲಾವರಿಸಿ, ರಾತ್ರಿಯಾಗಿ ಸದ್ದೆಲ್ಲ ಅಡಗಿ ನಿಶ್ಯಬ್ದವಾಯಿತು. ರಾಜಕುಮಾರಿ ಮತ್ತೆ ಬಾಳೆಗಿಡಕ್ಕೆ ಕೈ ಮುಗಿದು 'ಬಾಳೆ ಗಿಡ, ಬಾಳೆ ಗಿಡ ಬಾಗಿಲು ತೆರೆ' ಎಂದಳು. ಬಾಳೆ ಗಿಡ ಮತ್ತೆ ಎರಡು ಭಾಗವಾಗಿ ಬಾಯಿಬಿಟ್ಟಿತು. ಅವಳು ಈಚೆಗೆ ಬಂದು ಸುತ್ತಲೂ ನೋಡಿದಳು. ಬೆಳದಿಂಗಳ ರಾತ್ರಿಯಲ್ಲಿ ತೋಟದ ತುಂಬಾ ಹೂವಿನ ಗಿಡಗಳು ಘಮಗುಟ್ಟುತ್ತಿದ್ದವು. ಹಣ್ಣಿನ ಮರಗಳು ಫಲಭಾರದಿಂದ ಜಗ್ಗುತ್ತಿದ್ದವು. ಎದುರಿಗೆ ತಿಳಿನೀರಿನ ಕೊಳ ಹೊಳೆಯುತ್ತಿತ್ತು. ರಾಜಕುಮಾರಿಗೆ ಹೊಟ್ಟೆಯಲ್ಲಿ ಹಸಿವು ಭುಗಿಲೆದ್ದಿತು. ಪಾಪ ಹಿಂದಿನ ದಿನದಿಂದ ಆಹಾರವಿರಲಿಲ್ಲ. ಹೆಚ್ಚು ಯೋಚಿಸದೆ ಕೈಗೆ ಸಿಕ್ಕ ಒಂದಷ್ಟು ಹಣ್ಣುಗಳನ್ನು ಕಿತ್ತು ಉಡಿಯಲ್ಲಿಟ್ಟುಕೊಂಡು ಬಂದು ಕೊಳದ ಬಳಿ ಕುಳಿತು ತಿಂದು, ಕೊಳದ ತಿಳಿ ನೀರನ್ನು ಕುಡಿದಳು. ಜೀವ ಬಂದಂತಾಗಿ ಹಾಯೆನಿಸಿತು. ಸ್ವಲ್ಪ ಹೊತ್ತು ತೋಟದಲ್ಲಿ ತಿರುಗಾಡಿ ಎರಡು ದೊಡ್ಡ ಗುಲಾಬಿ ಹೂಗಳನ್ನು ಕಿತ್ತು ಮುಡಿದು ಕೊಳದಲ್ಲಿ ತನ್ನ ಅಂದ ಚಂದವನ್ನು ನೋಡಿಕೊಂಡು ಮತ್ತೆ ಬಾಳೆ ಗಿಡದೊಳಗೆ ಸೇರಿಕೊಂಡಳು. ಎರಡು ದಿನ ಇದೇ ದಿನಚರಿಯಾಯಿತು.

ಅದು ಒಬ್ಬ ರಾಜಕುಮಾರನಿಗೆ ಸೇರಿದ್ದ ತೋಟ. ಅವನು ಪ್ರಕೃತಿ ಪ್ರೇಮಿ. ಅಪಾರ ಹಣ ಸುರಿದು ದೇಶ ವಿದೇಶಗಳಿಂದ ತರಹೇವಾರಿ ಹಣ್ಣು ಹೂವುಗಳ ಗಿಡಗಳನ್ನು ತರಿಸಿ ಅಂದವಾಗಿ ಬೆಳೆಸಿದ್ದನು. ತನ್ನ ತೋಟವನ್ನು ತುಂಬಾ ಪ್ರೀತಿಸುತ್ತಿದ್ದು ಎರಡು ಮೂರು ದಿನಗಳಿಗೊಮ್ಮೆ ಬಂದು ಅಲ್ಲಿ ವಿಹಾರ ಮಾಡಿ ಸಂತೋಷಪಡುತ್ತಿದ್ದನು. ಮರುದಿನ ರಾಜಕುಮಾರ ತೋಟಕ್ಕೆ ಬಂದ ಕೂಡಲೇ ಅವನಿಗೆ ಇಲ್ಲಿ ಏನೋ ವ್ಯತ್ಯಾಸವಾಗಿದೆ ಎಂದು ತೋರಿತು. ಸೂಕ್ಷ್ಮವಾಗಿ ಗಮನಿಸಿದಾಗ ಗಿಡ ಮರಗಳಲ್ಲಿ ಹಣ್ಣು ಹೂವು ಕಡಿಮೆಯಾಗಿರುವುದನ್ನು ಕಂಡು ಆಶ್ಚರ್ಯವಾಯಿತು. ಯಾರ ಕೆಲಸವಿರಬಹುದು. ಕಾವಲುಗಾರರನ್ನು ಕೇಳಿದರೆ ಅವರಿಗೇನೂ ತಿಳಿಯದು. ಅವರು ಅಷ್ಟಿಷ್ಟು ಕಾವಲು ಕಾದು ರಾತ್ರಿ ನಿದ್ದೆ ಹೋದ ನಂತರ ರಾಜಕುಮಾರಿ ಈಚೆಗೆ ಬರುತ್ತಿದ್ದಳು. ಇದುವರೆಗೆ ಹೀಗಾಗಿರಲಿಲ್ಲ. 'ಇರಲಿ ಇವತ್ತು ನಾನೇ ಕಾವಲು ಕಾಯುತ್ತೇನೆ. ಯಾರು ಬರುತ್ತಾರೋ ನೋಡೇ ಬಿಡೋಣ' ಎಂದು ರಾಜಕುಮಾರ ಅಂದು ರಾತ್ರಿ ಮಂಚವನ್ನು ತೋಟದಲ್ಲಿ ಹಾಕಿಸಿಕೊಂಡು ಎಚ್ಚರವಾಗಿದ್ದನು. ತಿಂಗಳ ಬೆಳಕು ತಂಪು ಗಾಳಿ